CCE-III-RR/PR/NSR/NSPR(B)/222/9230

**B**

**ಆಗಸ್ಟ್ 2024 ರ ಪರೀಕ್ಷೆ-3**

**AUGUST 2024 EXAMINATION-3**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

**ಸಂಕೇತ ಸಂಖ್ಯೆ : 85-K**
**Code No. : 85-K**

**CCE RR/PR/ NSR/NSPR**
**Reduced Syllabus**

Question Paper Serial No.

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**
**(Regular Repeater / Private Repeater / NSR / NSPR)**

ದಿನಾಂಕ : 06. 08. 2024 ] [ Date : 06. 08. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**06. 08. 2024**

**Tear here**

**I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** **8 × 1 = 8**

1. ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾದುದು

   (A) ಚಾರ್ಲ್ಸ್‌ವುಡ್‌ನ ಶಿಫಾರಸುಗಳು

   (B) ಪೀಲ್ ಸಮಿತಿಯ ವರದಿ

   (C) ನ್ಯಾಯಾಂಗ ಸುಧಾರಣೆ

   (D) ಮೆಕಾಲೆಯ ವರದಿ

2. ಚೌರಿಚೌರ ಘಟನೆಯ ನಂತರ ಗಾಂಧೀಜಿಯವರು ಹಿಂತೆಗೆದುಕೊಂಡ ಚಳುವಳಿ

   (A) ಕಾನೂನು ಭಂಗ ಚಳುವಳಿ

   (B) ಖಿಲಾಫತ್ ಚಳುವಳಿ

   (C) ಕ್ವಿಟ್‌ಇಂಡಿಯಾ ಚಳುವಳಿ

   (D) ಅಸಹಕಾರ ಚಳುವಳಿ

3. ಅಂತಾರಾಷ್ಟ್ರೀಯ ಸಂಬಂಧ ವೃದ್ಧಿಗಾಗಿ ಪಂಚಶೀಲ ತತ್ವಗಳನ್ನು ಅಳವಡಿಸಿಕೊಂಡ ದೇಶಗಳು

(A) ಭಾರತ–ಪಾಕಿಸ್ತಾನ

(B) ಭಾರತ–ಅಮೆರಿಕಾ

(C) ಭಾರತ–ಚೀನಾ

(D) ಭಾರತ–ರಷ್ಯಾ

4. ಸ್ವ–ಸಹಾಯ ಸಮೂಹಗಳ ರಚನೆಯ ಉದ್ದೇಶ

(A) ನಗರಾಭಿವೃದ್ಧಿ

(B) ಮಹಿಳಾ ಸಬಲೀಕರಣ

(C) ಕೈಗಾರಿಕೀಕರಣ

(D) ವಿದೇಶಿ ವ್ಯಾಪಾರಕ್ಕೆ ಉತ್ತೇಜನ

5. ಭಾರತದಲ್ಲಿಯೇ ಅತ್ಯಂತ ಎತ್ತರವಾದ ವಿವಿಧೋದ್ದೇಶ ನದಿ ಕಣಿವೆ ಯೋಜನೆ

(A) ಭಾಕ್ರಾ-ನಂಗಲ್ ಯೋಜನೆ

(B) ಕೋಸಿ ಯೋಜನೆ

(C) ದಾಮೋದರ ನದಿಕಣಿವೆ ಯೋಜನೆ

(D) ತುಂಗಭದ್ರಾ ಯೋಜನೆ

6. ಲ್ಯಾಟರೈಟ್ ಮಣ್ಣು ಉತ್ಪತ್ತಿಯಾಗಲು ಕಾರಣವಾಗುವ ಪರಿಸ್ಥಿತಿಗಳು

(A) ನದಿಗಳ ಸಂಚಯನ ಕಾರ್ಯ

(B) ಬಸಾಲ್ಟ್ ಶಿಲೆಗಳ ಶಿಥಿಲೀಕರಣ

(C) ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ

(D) ಜೈವಿಕ ವಸ್ತುಗಳ ಕೊಳೆಯುವಿಕೆ

7. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ

(A) RBI

(B) UNESCO

(C) UNICEF

(D) UNDP

8. ಗಿರೀಶನು ಖರೀದಿಯಲ್ಲಿ ತನಗಾದ ಅನ್ಯಾಯದ ವಿರುದ್ಧ ರಾಜ್ಯ ಗ್ರಾಹಕ ಆಯೋಗಕ್ಕೆ ದೂರು ಸಲ್ಲಿಸಿರುವನು. ಅವನಿಗಾದ ಅನ್ಯಾಯದ ಮೌಲ್ಯವು

(A) ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು

(B) ಇಪ್ಪತ್ತು ಲಕ್ಷದಿಂದ ಒಂದು ಕೋಟಿ ರೂಪಾಯಿಗಳು

(C) ಹತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆ

(D) ಹತ್ತು ಲಕ್ಷದಿಂದ ಇಪ್ಪತ್ತು ಲಕ್ಷ ರೂಪಾಯಿಗಳು

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

9. ಪ್ರಥಮ ಆಂಗ್ಲೋ-ಮರಾಠ ಯುದ್ಧದ ಕೊನೆಯಲ್ಲಿ ಸಹಿ ಹಾಕಲಾದ ಒಪ್ಪಂದ ಯಾವುದು ?

10. 1953 ರಲ್ಲಿ ಫಜಲ್ ಅಲಿಯವರ ಅಧ್ಯಕ್ಷತೆಯಲ್ಲಿನ ಆಯೋಗವು ಏಕೆ ರಚನೆಯಾಯಿತು ?

11. ನೆಲ್ಸನ್ ಮಂಡೇಲ ಅವರನ್ನು 'ಆಫ್ರಿಕಾದ ಗಾಂಧಿ' ಎಂದು ಏಕೆ ಕರೆಯುತ್ತಾರೆ ?

12. ಮೌನ ಕಣಿವೆ ಆಂದೋಲನವನ್ನು ಏಕೆ ಹಮ್ಮಿಕೊಳ್ಳಲಾಯಿತು ?

13. 'ಸಾಮಾಜಿಕ ಸ್ತರ ವಿನ್ಯಾಸ' ಎಂದರೇನು ?

14. ಸಾಂದ್ರ ಬೇಸಾಯದ ಉಪಯೋಗವೇನು ?

15. ಪಂಚಾಯತ್‌ರಾಜ್ ಸಂಸ್ಥೆಗಳು ಯಾವ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ ?

16. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆಯನ್ನು ಹೆಸರಿಸಿ.

**III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **8 × 2 = 16**

17. ಭಯೋತ್ಪಾದನೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳನ್ನು ಪಟ್ಟಿ ಮಾಡಿ.

**ಅಥವಾ**

ಭಾರತದ ವಿದೇಶಾಂಗ ನೀತಿಯ ಗುರಿಗಳಾವವು ?

18. ನಿರುದ್ಯೋಗ ಸಮಸ್ಯೆಯನ್ನು ಹೇಗೆ ಪರಿಹರಿಸಬಹುದು ?

**ಅಥವಾ**

ಅಸಂಘಟಿತ ಕೆಲಸಗಾರರು ಎದರಿಸುವ ಸವಾಲುಗಳೇನು ?

19. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯುವುದು ಯುರೋಪಿಯನ್ನರಿಗೆ ಅನಿವಾರ್ಯವಾಗಿತ್ತು. ಏಕೆ ?

20. ಭಾರತವು ಸ್ವಾತಂತ್ರ್ಯ ಗಳಿಸಿದ ನಂತರದಲ್ಲಿ ಎದುರಿಸಿದ ಸಮಸ್ಯೆಗಳಾವವು ?

21. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವವು ?

22. ಮಣ್ಣಿನ ಸವೆತವು ವ್ಯವಸಾಯದ ಉತ್ಪಾದಕತೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ. ಹೇಗೆ ?

23. ಮಾನವ ಅಭಿವೃದ್ಧಿ ಸೂಚಿಗಳನ್ನು ವಿವರಿಸಿ.

24. ಸಂವಿಧಾನದ 73 ನೇ ತಿದ್ದುಪಡಿಯ ಉದ್ದೇಶಗಳೇನು ?

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**9 × 3 = 27**

25. ಬ್ರಹ್ಮಸಮಾಜದ ಬೋಧನೆಗಳಾವವು ?

**ಅಥವಾ**

ಡಾ. ಆ್ಯನಿಬೆಸೆಂಟ್‌ರವರು ಪ್ರತಿಪಾದಿಸಿದ ಸುಧಾರಣಾ ಕ್ರಮಗಳಾವವು ?

26. ಸಂಪರ್ಕ ಮಾಧ್ಯಮಗಳ ಪ್ರಾಮುಖ್ಯತೆ ಏನು ?

**ಅಥವಾ**

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ.

27. ಭಾರತವನ್ನು ಸಬಲೀಕರಣಗೊಳಿಸಲು ಗ್ರಾಮೀಣಾಭಿವೃದ್ಧಿಯು ಅವಶ್ಯಕ. ಏಕೆ ?

**ಅಥವಾ**

ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚಿಯು ಕಡಿಮೆ ಇದೆ. ಏಕೆ ?

28. ಪ್ರತಿಯೊಬ್ಬರ ಜೀವನದಲ್ಲಿ ಬ್ಯಾಂಕ್ ವ್ಯವಹಾರಗಳು ಅತ್ಯಂತ ಅವಶ್ಯಕವಾಗಿವೆ. ಏಕೆ ? ಸಮರ್ಥಿಸಿ.

**ಅಥವಾ**

1986 ರ ಗ್ರಾಹಕ ಸಂರಕ್ಷಣಾ ಕಾಯ್ದೆಯು ಗ್ರಾಹಕರ ಹಿತರಕ್ಷಣೆಯನ್ನು ಹೇಗೆ ಮಾಡುತ್ತದೆ ?

29. ಬ್ರಿಟಿಷರ ವಿರುದ್ಧ ಹಲಗಲಿಯ ಬೇಡರು ನಡೆಸಿದ ಹೋರಾಟವನ್ನು ವಿವರಿಸಿ.

30. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು ?

31. ಭಾರತವು ರಷ್ಯಾದೊಂದಿಗೆ ಹೊಂದಿರುವ ಬಾಂಧವ್ಯವನ್ನು ವಿವರಿಸಿ.

32. ಅಸ್ಪೃಶ್ಯತೆಯ ನಿವಾರಣೆಗೆ ಕೈಗೊಳ್ಳಲಾದ ಸಾಂವಿಧಾನಿಕ ಮತ್ತು ಶಾಸನೀಯ ಕ್ರಮಗಳಾವವು ?

33. ನಿನ್ನೆ ರಾತ್ರಿ ಬಂಗಾಳಕೊಲ್ಲಿಯಲ್ಲಿ ತೀವ್ರ ವಾಯುಭಾರ ಕುಸಿತ ಉಂಟಾಗಿದ್ದು ಅದರ ಪರಿಣಾಮಗಳನ್ನು ಎದುರಿಸಲು ತಮಿಳುನಾಡು ಸರ್ಕಾರವು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಯ ಕ್ರಮಗಳೇನು ?

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**4 × 4 = 16**

34. ಪೊಲೀಸ್ ವ್ಯವಸ್ಥೆಯಲ್ಲಿ ಬ್ರಿಟಿಷರ ಕಾಲದಲ್ಲಿ ಜಾರಿಗೆ ತಂದ ಸುಧಾರಣೆಗಳನ್ನು ವಿವರಿಸಿ.

**ಅಥವಾ**

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳನ್ನು ವಿವರಿಸಿ.

35. ಬಾಲಗಂಗಾಧರ ತಿಲಕರು ಭಾರತೀಯರಲ್ಲಿ ರಾಷ್ಟ್ರೀಯ ಹೋರಾಟವನ್ನು ಪ್ರೇರೇಪಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದರು. ದೃಢೀಕರಿಸಿ.

36. ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಸ್ಥಾನಮಾನಗಳಲ್ಲಿ ಸಾಕಷ್ಟು ಸುಧಾರಣೆಗಳಾಗುತ್ತಿವೆ. ಸಮರ್ಥಿಸಿ.

37. ಅರಣ್ಯ ಸಂರಕ್ಷಣೆ ಹೇಗೆ ಕೈಗೊಳ್ಳಬಹುದು ?

**VI.** 38. <u>**ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :**</u> **1 + 4 = 5**

a) ಅರಾವಳಿ ಶ್ರೇಣಿ

b) ಹಿರಾಕುಡ್ ಯೋಜನೆ

c) ಭಾರತದ ಹೆಬ್ಬಾಗಿಲು

d) ಕೋಲಾರ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. **5**

DO NOT WRITE ANYTHING HERE